## ಈ ಕಾಲದ ಅತ್ಯಗತ್ಯ

‘ಸುಖೀಸಾಂಗತ್ಯಕ್ಕೆ ಸಮಾಲೋಚನೆ’ (ಫೆ. 26, ಡಾ. ಗಿರಿಧರ ರಾವ್ ಹವಲ್ದಾರ್) ಅತ್ಯುತ್ತಮ ಲೇಖನ. ಪರಸ್ಪರ ನಂಬಿಕೆ, ಗೌರವ, ವಿಶ್ವಾಸ ಎಲ್ಲವೂ ಮಾಯವಾಗುತ್ತಿರುವ ಸಮಯದಲ್ಲಿ ಲೇಖಕರು ವ್ಯವಸ್ಥಿತವಾಗಿ, ವೈಜ್ಞಾನಿಕವಾಗಿ ದಾಂಪತ್ಯದ ಬಗ್ಗೆ ನಿರೂಪಿಸಿರುವರು. ಈಗಿನ ಯುಗದಲ್ಲಿ ಹಗಲುಗನಸುಗಳನ್ನು



ಕಟ್ಟಿಕೊಂಡು ಅಸಹಜ ನಿರೀಕ್ಷೆಗಳನ್ನು ಇಟ್ಟುಕೊಂಡ ಯುವಜನತೆ ದಾರಿ ತಪ್ಪುತ್ತಿದೆ. ಅಂತಹವರಿಗೆ ಸರಿಯಾದ ದಾರಿಯನ್ನು ನಿರೂಪಿಸಿರುವರು. ವಿವಾಹ ಪೂರ್ವ ಸಮಾಲೋಚನೆಯಿಂದ ದಾಂಪತ್ಯ ಜೀವನದಲ್ಲಿ ಶಾಂತಿ, ನೆಮ್ಮದಿ ಕಾಣಲು ಸಾಧ್ಯ. ಇದರೊಂದಿಗೆ ಜೀವನ ಮೌಲ್ಯಗಳನ್ನು ಅಳವಡಿಸಿಕೊಂಡರೆ ಉತ್ತಮ ಸಮಾಜ ನಿರ್ಮಾಣಕ್ಕೆ ಸಹಕಾರಿಯಾದೀತು.

—ವಾಸಣ್ಣ, ಧಾರವಾಡ

## ಎಚ್ಚರಿಕೆ ಇರಲೇಬೇಕು...

‘ಆನ್‌ಲೈನ್ ವಧು ವರಾನ್ವೇಷಣೆ; ಇರಲಿ ಎಚ್ಚರ...’ (ಫೆ. 26, ಗೋವರ್ಧನ ಎಸ್. ಎನ್.) ಮುಖಪುಟ ಲೇಖನ ಪ್ರಸ್ತುತವಾಗಿದೆ. ಹಿಂದೆ ಇದ್ದ ಮದುವೆ ಬ್ರೋಕರ್‌ಗಳಿಗೆ ಪರ್ಯಾಯವಾಗಿ ಇಂದು ‘ಆನ್‌ಲೈನ್ ಮ್ಯಾಟ್ರಿಮೊನಿ’ ಪ್ರಚಲಿತದಲ್ಲಿರುವುದು ಆಧುನಿಕತೆಯ ಪ್ರತಿಬಿಂಬದಂತಿದೆ. ಪ್ರತಿ ಪುರುಷ, ಮಹಿಳೆಗೂ ಈ ವ್ಯವಸ್ಥೆಯಿಂದ ಅನುಕೂಲ– ಅನನುಕೂಲ (ಅಪಾಯ) ಎರಡೂ ಇದೆ. ಆಯ್ಕೆ ಸಂದರ್ಭದಲ್ಲಿ ಅತ್ಯಂತ ಹೆಚ್ಚಿನ ಕಾಳಜಿ, ಜಾಗ್ರತೆ ವಹಿಸದಿದ್ದಲ್ಲಿ ಮೋಸಗಾರರ ಜಾಲದಲ್ಲಿ ಸಿಲುಕುವುದು ನಿಶ್ಚಿತ.

—ವಾಣಿ ರಾಮಾರಾಧ್ಯ, ಮೈಸೂರು




## ಮನ್ವಂತರ; ಎಚ್ಚರ!

‘ಆನ್‌ಲೈನ್’ ಪ್ರಶ್ನೆ ಹಾಗಿರಲಿ, ಈ ನವ ಮನ್ವಂತರದಲ್ಲಿ ‘ಮದುವೆಯ ಬಗೆಗೆ ಎಷ್ಟು ಎಚ್ಚರ ವಹಿಸಿದರೂ ಸಾಲದು, ಅಲ್ಲವೆ?’

—ಸಿ.ಪಿ.ಕೆ., ಮೈಸೂರು

## ಓದಲೇಬೇಕಾದ ಲೇಖನ

ಮದುವೆ ಎಂಬುದು ಜೀವನದ ಮಹತ್ವದ ನಿರ್ಧಾರ. ಕೇವಲ ಹೆಣ್ಣು ಮತ್ತು ಗಂಡುಗಳ ಸಂಬಂಧವಲ್ಲ. ಎರಡು ಕುಟುಂಬಗಳ ನಡುವೆ ಏರ್ಪಡುವ ನೂತನ ಬಾಂಧವ್ಯ. ಆನ್‌ಲೈನ್‌ನಲ್ಲಿ ವರ/ವಧುವನ್ನು ಒಂದೆರಡು ಸಂಭಾಷಣೆಯಲ್ಲಿ ಸಂಪೂರ್ಣ ಅಸಲಿ ಮಾಹಿತಿ ತಿಳಿಯಲಸಾಧ್ಯ. ಸುಂದರವಾಗಿ ಕಾಣಲು ಇಂದು ಅನೇಕಾನೇಕ ಸೌಲಭ್ಯವುಂಟು. ಹಾಗೆ ಅವನು/ಅವಳು ನೀಡುವ ವಿದ್ಯಾರ್ಹತೆ, ಕೆಲಸ ಮಾಡುತ್ತಿರುವ ಸಂಸ್ಥೆಯ ವಿವರಣೆ ಹಾಗೂ ಆ ವ್ಯಕ್ತಿ ಅಲ್ಲಿ ನೌಕರಿಯಲ್ಲಿ ಇರುವ ಮಾಹಿತಿ ಇವೆಲ್ಲವನ್ನೂ ತಂತ್ರಜ್ಞಾನದ ಮೂಲಕ ಪರಿಶೀಲಿಸುವುದು ಇಂದಿನ ಕಾಲದಲ್ಲಿ ಬಹಳ ಮುಖ್ಯ.

ಆನ್‌ಲೈನ್‌ನಲ್ಲಿ ಹತ್ತು ಹಲವು ತೊಡಕುಗಳನ್ನು ಭೇದಿಸುವ ಚತುರತೆಯೊಂದಿಗೆ ತಂದೆ ತಾಯಿಯರ ಸಲಹೆ ಸೂಚನೆಗಳನ್ನು ಪಾಲಿಸುವುದೂ ಉತ್ತಮ. ಲೇಖಕರು ಉತ್ತಮ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಓದಲೇಬೇಕಾದ ಲೇಖನ.

—ಮಧು, ಬೆಂಗಳೂರು

## ಅಪರೂಪದ ಟೊಮ್ಯಾಟೊ



‘ಆಫ್ರಿಕನ್ ಟೋಗೋ ಟೊಮ್ಯಾಟೊ’ (ಫೆ. 26, ಎಲ್.ಸಿ. ಚನ್ನರಾಜು) ಲೇಖನ ಚೆನ್ನಾಗಿದೆ. ಅಪರೂಪದ ಟೊಮ್ಯಾಟೊ ತಳಿಯ ಪರಿಚಯ, ಅದರ ಹಿನ್ನೆಲೆ, ಬೆಳೆಯುವ ವಿಧಾನ, ಉಪಯೋಗ ಎಲ್ಲದರ ವಿವರಣೆ ಚೊಕ್ಕವಾಗಿದೆ. ಇಂಥ ಅಪರೂಪದ ಪ್ರಯೋಗಗಳು ಕೃಷಿಯಲ್ಲಿ ವ್ಯಾಪಕವಾಗಿ ನಡೆಯುತ್ತಿರಬೇಕು.

—ಕುಶಾಲ್, ಹಾಸನ

## ಮನಸೂರೆಗೊಂಡ ಚಿತ್ರಗಳು

‘ಎಲ್ಲೆಲ್ಲೂ ಯಲ್ಲಮ್ಮನ ಭಕ್ತರು’ (ಫೆ. 26, ಇಮಾಮ್‌ಹುಸೇನ್ ಗೂಡುನವರ) ‘ಚಿತ್ರಪಟ ಕಥನ’ ಮನಸೂರೆಗೊಂಡಿತು. ಲೇಖನದೊಂದಿಗೆ ಜಾತ್ರೆಯ ಚಿತ್ರಗಳು ಬಹಳ ಸುಂದರವಾಗಿವೆ. ಯಲ್ಲಮ್ಮನ ಜಾತ್ರೆಯ ವಿಶೇಷತೆ, ಆ ಜಾತ್ರೆಗೆ ಉತ್ಸಾಹದಿಂದ ಸಾಗಿಬರುವ ಹಳ್ಳಿಹಳ್ಳಿಗಳ ಜನಸಾಗರ, ಜಾತ್ರೆಗೆ ಬರುವಾಗಿನ ಅವರ ಸಿದ್ಧತೆ, ಪೂಜೆ



ಪುನಸ್ಕಾರ– ರೀತಿ ರಿವಾಜುಗಳೆಲ್ಲವನ್ನೂ ಕಣ್ಣಿಗೆ ಕಟ್ಟುವಂತೆ ಲೇಖಕರು ವಿವರಿಸಿದ್ದಾರೆ.

—ಮೃದುಲಾ ಎಸ್., ಮೈಸೂರು

## ನಾಡಿನ ಶಕ್ತಿಕೇಂದ್ರ

ಯಲ್ಲಮ್ಮನ ಜಾತ್ರೆಯ ವೈಭವವನ್ನು ತೆರೆದಿಟ್ಟ ಭರತ್ ಕಂದಕೂರ ಅವರ ಚಿತ್ರಗಳು ಗಮನಸೆಳೆಯುವಂತಿವೆ. ಯಲ್ಲಮ್ಮನ ಜಾತ್ರೆ ಸಮಾಜದಲ್ಲಿ ಏಕತೆ, ಸಮತೆ, ಸಹಬಾಳ್ವೆ, ಭಕ್ತಿ ಭಾವ ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಧರ್ಮ, ಜಾತಿ, ಮತ ಪಂಗಡಗಳನ್ನು ಮೀರಿ ಸರ್ವಜನರನ್ನು ಒಂದುಗೂಡಿಸುವ ಯಲ್ಲಮ್ಮನ ಜಾತ್ರೆ ಈ ನಾಡಿನ ಶಕ್ತಿಕೇಂದ್ರ.

—ಟಿ. ಶಿವಮೂರ್ತಿ ಉಪ್ಪಾರ,
ಚಾಮರಾಜನಗರ

## ಜ್ಞಾನ-ವಿಜ್ಞಾನ

‘ವಿಜ್ಞಾನ ಲೋಕ’ದಲ್ಲಿ ಮಹಿಳಾ ವಿಜ್ಞಾನಿಗಳ ಕುರಿತು ಬೆಳಕು ಚೆಲ್ಲುವ ಗುರುರಾಜ್ ಎಸ್. ದಾವಣಗೆರೆ ಅವರ ಲೇಖನಗಳು ಪ್ರಕಟವಾಗುತ್ತಿರುವುದು ಇಂದಿನ ವಿದ್ಯಾರ್ಥಿಗಳ ಜ್ಞಾನಕ್ಕೆ ಪೂರಕವಾಗಿದೆ ಹಾಗೂ ವಿಜ್ಞಾನದ ಅಭಿರುಚಿ ಇರುವ ಓದುಗರಲ್ಲಿ ಕುತೂಹಲ ಮೂಡಿಸಿದೆ.

— ಮಾಸ ಬೆಳಲಗೆರೆ, ಶಿವಮೊಗ್ಗ

## ಅರ್ಥಪೂರ್ಣ ಅಂಕಣ

ವಿಜ್ಞಾನ ಲೋಕದ ಮಹಿಳಾ ತಾರೆಗಳ ಪರಿಚಯ ಅರ್ಥಪೂರ್ಣವಾಗಿದೆ. ‘ಹಿತ್ತಲ ಗಿಡ ಮದ್ದಲ್ಲ’ ಎಂಬಂತೆ ನಮ್ಮಲ್ಲಿರುವ ವಿಜ್ಞಾನಿಗಳ ಪರಿಚಯ ನಮಗೇ ಇಲ್ಲದಿರುವುದು ವಿಷಾದನೀಯ. ಈ ನಿಟ್ಟಿನಲ್ಲಿ ಮಹಿಳಾ ವಿಜ್ಞಾನಿಗಳ ಪರಿಚಯಾತ್ಮಕ ಲೇಖನ ಪ್ರಕಟಿಸುತ್ತಿರುವುದು ಶ್ಲಾಘನೀಯ. ಇದರೊಂದಿಗೆ ಕರ್ನಾಟಕದಲ್ಲಿರುವ ವಿಜ್ಞಾನಿಗಳ ಪರಿಚಯ ಮಾಡಿಕೊಟ್ಟರೆ ಅದ್ಭುತ ಕಾರ್ಯವಾಗಿರುತ್ತದೆ. ಅಲ್ಲದೆ ಸಂಗ್ರಹಯೋಗ್ಯವಾಗುತ್ತದೆ.

—ಧನಲಕ್ಷ್ಮಿ ಪುರುಷೋತ್ತಮರಾವ್, ಕೋಲಾರ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in